ಈ) ಉದ್ಭವಿಸುವಿದಿಲ್ಲ.

ಉ) ಈ ಕಾಮಗಾರಿಯನ್ನು ಸೆಪ್ಟೆಂಬರ್ 2014ರ ಒಳಗಾಗಿ ಪೂರ್ಣಗೊಳಿಸಲಾಗುವುದು.

ಊ) ಕಾಮಗಾರಿಯ ಪ್ರಗತಿ ಆದರಿಸಿ ಅನುದಾನವನ್ನು ಕ್ರೀಡಾಂಗಣ ಸಮಿತಿಯಿಂದ ಬಿಡುಗಡೆ ಮಾಡಲಾಗಿದೆ.

ಭಾರಿ ಮಳೆಯಿಂದ ನಷ್ಟವಾದ ಫಸಲುಗಳಿಗೆ ಪರಿಹಾರ ಕೋರಿ ಬಂದ ಅರ್ಜಿಗಳು

2105 (2686); ಶ್ರೀ ಬೋಪಯ್ಯ ಕೆ.ಜಿ. (ವಿರಾಜಪೇಟೆ)

ಅ) ಕೊಡಗು ಜಿಲ್ಲೆಯಲ್ಲಿ 2012–13ನೇ ಸಾಲಿನಲ್ಲಿ ಬಿದ್ದ ಭಾರಿ ಮಳೆಯಿಂದ ಪರಿಹಾರ ಕೋರಿ ಬಂದ ಅರ್ಜಿಗಳೆಷ್ಟು;

ಆ) ಕಾಫಿ ಏಲಕ್ಕಿ, ಒಳ್ಳೆ ಮೆಣಸು ಹಾಗೂ ಭತ್ತದ ಫಸಲುಗಳ ನಷ್ಟವೆಷ್ಟು; (ವಿವರವನ್ನು ತಾಲ್ಲೂಕುವಾರು ಮತ್ತು ಪಂಚಾಯ್ತಿವಾರು ನೀಡುವುದು);

ಇ) ಈ ಅರ್ಜಿಗಳ ಪೈಕಿ ಎಷ್ಟು ಜನರಿಗೆ ಪರಿಹಾರ ನೀಡಲಾಗಿದೆ; (ಬೆಳೆಗಳ ಸಮೇತ ತಾಲ್ಲೂಕುವಾರು, ಗ್ರಾಮವಾರು ವಿವರಗಳನ್ನು ನೀಡುವುದು);

ಈ) ಇದರಲ್ಲಿ ಎಷ್ಟು ಅರ್ಜಿಗಳು ತಿರಸ್ಕೃತವಾಗಿವೆ; ಹಾಗಿದ್ದಲ್ಲಿ, ಕಾರಣವೇನು; (ವಿವರಗಳನ್ನು ನೀಡುವುದು);

ಉ) ಇನ್ನೂ ಎಷ್ಟು ಜನರಿಗೆ ಪರಿಹಾರ ಕೊಡುವುದು ಬಾಕಿ ಇದೆ; ಬಾಕಿ ಇದ್ದಲ್ಲಿ, ಯಾವಾಗ ಕೊಡಲಾಗುವುದು; ಈವರೆಗೆ ನೀಡಲಾದ ಒಟ್ಟು ಮೊತ್ತವೆಷ್ಟು?

ಶ್ರೀ ಶ್ರೀನಿವಾಸ ಪ್ರಸಾದ್ (ಕಂದಾಯ ಸಚಿವರು)

ಅ) ಭಾರಿ ಮಳೆಯಿಂದಾದ ಬೆಳೆ ಹಾನಿಗೆ ಒಟ್ಟು–7897 ಅರ್ಜಿಗಳು ಸ್ವೀಕೃತವಾಗಿವೆ.

ಆ) ಅತಿವೃಷ್ಟಿಯಿಂದ ಮೆಣಸು ಹಾಗೂ ಭತ್ತದ ಫಸಲುಗಳು ಹಾನಿಯಾಗಿದ್ದು, ತಾಲ್ಲೂಕುವಾರು ವಿವರ **ಅನುಬಂಧ–1**ರಲ್ಲಿ ನೀಡಿದೆ.

ಇ) ಅರ್ಜಿ ಸಲ್ಲಿಸಿದ ಎಲ್ಲಾ ರೈತರಿಗೂ ಪರಿಹಾರ ವಿತರಿಸಲಾಗಿದೆ. ತಾಲ್ಲೂಕುವಾರು ವಿವರ **ಅನುಬಂಧ–1** ರಲ್ಲಿ ನೀಡಿದೆ.

ಈ) ಯಾವುದೇ ಅರ್ಜಿಗಳು ತಿರಸ್ಕೃತವಾಗಿರುವುದಿಲ್ಲ.

ಉ) 2012–13 ನೇ ಸಾಲಿನ ಪ್ರಕರಣಗಳಿಗೆ ಪರಿಹಾರ ಪಾವತಿಗೆ ಬಾಕಿ ಇರುವುದಿಲ್ಲ. ಈವರೆಗೆ ನೀಡಲಾದ ಒಟ್ಟು ಮೊತ್ತ ₹ 131.94 ಲಕ್ಷಗಳು.

ಅನುಬಂಧ–1

ವಿಧಾನ ಸಭೆಯ ಸದಸ್ಯರಾದ ಶ್ರೀ ಕೆ ಜಿ ಬೋಪಯ್ಯ (ವಿರಾಜಪೇಟೆ) ಇವರ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 2686 ರ ಭೋಷ್ಟಾರೆ

ಕ್ರ ಸಂ	ತಾಲ್ಲೂಕು	ಒಟ್ಟು ಗ್ರಾಮಗಳ ಸಂಖ್ಯೆ	ಸ್ವೀಕರಿಸಿದ ಅರ್ಜಿಗಳು	ಬೆಳೆ ವಿವರ				ಪರಿಹಾರ ಪಾವತಿಸಿದ ಒಟ್ಟು ಅರ್ಜಿಗಳ ಸಂಖ್ಯೆ	ಪಾವತಿಸಿದ ಒಟ್ಟು ಮೊತ್ತ
				ಕರಿಮೆಣಸು		ಭತ್ತ			
				ಸಂಖ್ಯೆ	ಮೊತ್ತ	ಸಂಖ್ಯೆ	ಮೊತ್ತ		
1	ಮಡಿಕೇರಿ	22	2426	2342	4966500	105	120580	2426	5087080.00
2	ಸೋಮವಾರಪೇಟೆ	0	0	0	0	0	0	0	0
3	ವಿರಾಜಪೇಟೆ	115	5471	3286	6208180	2185	1898850	5471	8107030.00
		137	7897	5628	11174680.00	2290	201943.00	7897	13194110.00